17ನೇ ಶತಮಾನದ metaphysical ಕಾವ್ಯದ ಲಕ್ಷಣಗಳನ್ನು ಹೋಲುತ್ತವೆ ಎನ್ನುವುದು. ಕೇವಲ ಕಾವ್ಯಭಾಷೆ, ರೂಪಕ ಸೃಷ್ಟಿಗಳಿಗೆ ಸಂಬಂಧಿಸಿದಂತೆ ಅಲ್ಲ, ಅನುಭವವನ್ನು ಗ್ರಹಿಸುವ ರೀತಿಯಲ್ಲಿಯೇ ಈ ಸಾಮ್ಯತೆ ಇದೆ. ಅಥವಾ ರಘುನಂದನ ವಿವರಿಸುವಂತೆ, ಇಂಗ್ಲಿಷ್‌ನ metaphysical ಕವಿಗಳಲ್ಲಿ ಅಭಿವ್ಯಕ್ತವಾಗುವ ಅಜ್ಞೇಯತೆ (agnosticism) ಬೇಂದ್ರೆಯವರ ಈ ಪದ್ಯಗಳಲ್ಲಿಯೂ ಅಭಿವ್ಯಕ್ತವಾಗಿದೆ. ಇದನ್ನು ರಘುನಂದನ ಹೀಗೆ ವಿವರಿಸುತ್ತಾರೆ:

'ಪ್ರಕೃತಿಯ ವ್ಯಾಪಾರ ಮತ್ತು ಮನುಷ್ಯ ವ್ಯಾಪಾರ, ಎರಡರ ಮರ್ಮವೂ ಕಡೆಗೂ ನಿಗೂಢವಾದದ್ದು ಎಂಬ ಸಂದೇಹ ಮತ್ತು ಅಜ್ಞೇಯತೆಯ ನೋಟ' (ಪುಟ 216).

"ಈ ಮೆಟಫಿಸಿಕಲ್ ಕವಿಗಳಲ್ಲಿಯೂ ಮತ್ತು ಬೇಂದ್ರೆಯವರ 'ಗಂಗಾವತರಣ' ಸಂಕಲನ ಹಾಗೂ ಅದಕ್ಕೆ ಹಿಂದೆ ಬಂದ ಅವರ ಸಂಕಲನಗಳಲ್ಲಿಯೂ, ಕಾವ್ಯಕರ್ಮದ ಒತ್ತು ಇರುವುದು ತೀವ್ರವಾದ ಐಹಿಕತೆಯ ಮೇಲೆ, ಆ ಐಹಿಕತೆಯಿಂದಲೇ ಹೊಮ್ಮಿದ ಅಧಿಭೂತತೆಯ ಮೀಮಾಂಸೆಯ ಮೇಲೆ: ಅಧಿಭೂತತೆಯ ಆ ಮೀಮಾಂಸೆಯು ಆಗೀಗ ಹೊಳೆಯಿಸಿದ ಆಧ್ಯಾತ್ಮಿಕತೆಯ ಕಣ್ಸನ್ನೆಗಳ ಮೇಲೆ; ಅಷ್ಟೇ ಹೊರತು, ಐಹಿಕತೆಯನ್ನು ಅಲ್ಲಗಳೆಯುವ ಅಧ್ಯಾತ್ಮದ ಮೇಲೆ ಅಲ್ಲ" (ಪುಟ 215).

ಈ ಮಾತುಗಳಿಗೆ ಆಧಾರವಾಗಿ ಕೃತಿಯ ಒಂದು ಬಹು ವಿಸ್ತಾರವಾದ ಭಾಗವು ಐಹಿಕತೆ, metaphysics (ಅಧಿಭೂತತೆ) ಇವುಗಳ ಬಗ್ಗೆ ಇದೆ. ಅಲ್ಲದೆ ಅನುಭವ, ಅನುಭೂತಿ, ಅನುಭಾವ ಇವುಗಳ ಬಗ್ಗೆಯೂ ಇದೆ. ಈ ಚರ್ಚೆಯು ಕಾವ್ಯ, ವಿಜ್ಞಾನ, ತತ್ವಜ್ಞಾನ ಈ ಎಲ್ಲ ಕ್ಷೇತ್ರಗಳನ್ನು, ಜ್ಞಾನ ಪ್ರಕಾರಗಳನ್ನು ಒಳಗೊಳ್ಳುತ್ತದೆ. ರಘುನಂದನ ಅವರ ವಾದದ ತಿರುಳೆಂದರೆ ವಿಜ್ಞಾನ ಹಾಗೂ ಕಲೆಗಳ ಹಿಂದೆ ಮೂಲಶಕ್ತಿಯಾಗಿರುವುದು 'ಅನುಭೂತಿ'. ಅದು ಹಠಾತ್ತನೆ ಹೊಳೆದಂತೆ ಅನ್ನಿಸಿದರೂ, ಅದರ ಹಿಂದೆ ಅಪಾರ, ತೀವ್ರ ಚಿಂತನೆಯಿರುತ್ತದೆ. ಅವರು ಕೊಡುವ ಉದಾಹರಣೆಗಳೆಂದರೆ ಗಣಿತ ಮೇಧಾವಿ ರಾಮಾನುಜಮ್ ಮತ್ತು ಆಲ್ಬರ್ಟ್ ಐನ್‌ಸ್ಟೈನ್, ಹಾಗೆಯೆ ವಚನಕಾರರು ಮತ್ತು ಸೂಫಿಗಳದ್ದು.

Metaphysics ಅತ್ಯವಶ್ಯಕವಾದರೂ ತಪ್ಪಾಗಿ ಭಾವಿಸುವ ಒಂದು ಅರ್ಥದಲ್ಲಿ ಐಹಿಕದಿಂದ, ಭೌತ ಜಗತ್ತಿನಿಂದ ಓಡಿಹೋಗುವ ಅಥವಾ ಅದನ್ನು ಅಮಾನ್ಯ ಮಾಡುವ ವಿಧಾನವಾಗಿಬಿಡಬಹುದು. ಹಾಗಂತ ಕಟ್ಟರ್ ಭೌತವಾದಿಗಳು, ನಾಸ್ತಿಕರು transcendental ಆದ ಯಾವುದನ್ನೂ ಒಪ್ಪದೇ ಇರುವುದು ಸ್ವೀಕಾರಾರ್ಹವಲ್ಲ. Metaphysical ಕಾವ್ಯ ಮತ್ತು ಬೇಂದ್ರೆ ಕಾವ್ಯ ಎರಡು ಜಗತ್ತುಗಳ ನಡುವೆ ಅಥವಾ ಜಗತ್ತಿನ ಎರಡು ವ್ಯಾಖ್ಯಾನಗಳ ನಡುವೆ ಉಯ್ಯಾಲೆ ಆಡುತ್ತವೆ. ಅದೊಂದು 'ಜೀಕು'. ದೊಂಬರ ಹೆಣ್ಣು ಹಗ್ಗದ ಮೇಲೆ ನಡೆಯುವಂತೆ ಅಪಾರ ತನ್ಮಯತೆ ಹಾಗೂ ಮುಕ್ತತೆ ಎರಡನ್ನು ಬಯಸುವ ಮನಸ್ಥಿತಿಯದು. ಯಾವುದನ್ನೂ ತಿರಸ್ಕರಿಸದೇ, ಎಲ್ಲದರ ಬಗ್ಗೆ ವೈಚಾರಿಕ ಸಂಶಯಗಳನ್ನು ಇಟ್ಟುಕೊಳ್ಳುವ ಪ್ರಜ್ಞೆ ಅದು. ಇದೇ ಅಜ್ಞೇಯತೆಯ ಮೂಲ ಸ್ವರೂಪ. ಇದರ ಒಂದು ಸ್ವರೂಪವನ್ನು ಇಂಗ್ಲಿಷ್‌ನ metaphysical ಕವಿಗಳಲ್ಲಿ ಕಾಣಬಹುದು. ಇದು ಎಲಿಯಟ್ ಹೇಳುವಂತೆ ಎಲ್ಲಾ ಶ್ರೇಷ್ಠ ಕಾವ್ಯದ ಗುಣವೂ ಹೌದು. ಇಂಗ್ಲಿಷ್ ಸಾಹಿತ್ಯ ಪ್ರಜ್ಞೆಯಲ್ಲಿ 17ನೇ ಶತಮಾನದಿಂದಾಚೆಗೆ ಉಂಟಾದ 'dissociation of sensibility'ಯಿಂದ ಉಂಟಾದ ಕಾವ್ಯದ ದೌರ್ಬಲ್ಯಗಳಿಗೆ ಇದು ಪರಿಹಾರವಾಯಿತು. ಬುದ್ಧಿ-ಭಾವಗಳ ವಿದ್ಯುದಾಲಿಂಗನ ಮಾತ್ರವಲ್ಲ, ಅವುಗಳ ಸಾಮರಸ್ಯ ಹುಡುಕಿದ metaphysical ಕಾವ್ಯವು ಇಂಗ್ಲಿಷ್ ನವ್ಯ ಕಾವ್ಯದ ಹುಟ್ಟಿಗೆ ಮಾದರಿಯಾಯಿತು. ಹಾಗೆಯೇ 'ಉಯ್ಯಾಲೆ'ಯಲ್ಲಿಯ ಬೇಂದ್ರೆ ಕಾವ್ಯವು ಕನ್ನಡ ನವ್ಯದ ಮುಂಗಾಣ್ಕೆಯಾಗಿತ್ತು. ಆದರೆ, 1938ರಲ್ಲಿ ಪ್ರಕಟವಾದ ಈ ಕೃತಿ 1950ರ ಹೊತ್ತಿಗೆ ಆರಂಭವಾದ ಕನ್ನಡ ನವ್ಯ ಕಾವ್ಯದ ಹುಟ್ಟಿಗೆ ಏಕೆ ಪ್ರಚೋದನೆಯಾಗಲಿಲ್ಲವೆನ್ನುವುದು ರಘುನಂದನರ ಪ್ರಶ್ನೆ ಮತ್ತು ಹುಡುಕಾಟವಾಗಿದೆ. ಅವರ ಪ್ರಕಾರ, ಒಂದು ಕಾರಣವೆಂದರೆ ಶ್ರೀ ಅರವಿಂದರ ಪ್ರಭಾವ, ಅವರ ತತ್ವಜ್ಞಾನದ ಪ್ರಭಾವ. ಇದನ್ನು ನಾನು ಒಪ್ಪುತ್ತೇನೆ. ಆದರೆ ಅದರ ವಿವರವಾದ ಚರ್ಚೆ ಇಲ್ಲಿ ಸಾಧ್ಯವಿಲ್ಲ. ಅರವಿಂದರ ಕಾವ್ಯಮೀಮಾಂಸೆ, ತತ್ವಜ್ಞಾನ ಹಾಗೂ ಕಾವ್ಯ ಇವೆಲ್ಲವನ್ನೂ ಆ ಚರ್ಚೆ ಒಳಗೊಳ್ಳಬೇಕಾಗುತ್ತದೆ. ಬೇಂದ್ರೆ ಪ್ರತಿಭೆ ಎಂಥದ್ದೆಂದರೆ, ಅರವಿಂದರ